# ಸ್ವಾಮಿ ನಿಖಿಲಾನಂದ (೧೮೯೫-೧೯೭೩)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

**ಭಾಗ ೧**



ಸ್ವಾಮಿ ನಿಖಿಲಾನಂದರ ಪೂರ್ವಾಶ್ರಮದ ಹೆಸರು ದಿನೇಶ ಚಂದ್ರ ದಾಸಗುಪ್ತ. ಅವರು ೧೮೯೫ರಲ್ಲಿ ಬಾಂಗ್ಲಾದೇಶದ ನೋವಾಖಾಲಿ ಜಿಲ್ಲೆಯಲ್ಲಿ ಜನಿಸಿದರು. ಅವರ ತಂದೆ ಶ್ರೀ ರಾಮ ಕೃಷ್ಣರ ಗೃಹಸ್ಥ ಶಿಷ್ಯರಾಗಿದ್ದ ರಾಮಚಂದ್ರ ದತ್ತರ ಮಂತ್ರಶಿಷ್ಯ ರಾಗಿದ್ದರು. ಹಾಗಾಗಿ ಚಿಕ್ಕಂದಿನಿಂದಲೂ ಅವರಿಗೆ ಶ್ರೀರಾಮ ಕೃಷ್ಣ-ವಿವೇಕಾನಂದರ ಜೀವನ ಹಾಗೂ ಉಪದೇಶಗಳ ಪರಿಚಯ ವಿತ್ತು. ಅವರು ಢಾಕಾ ಜಗನ್ನಾಥ ಕಾಲೇಜು ಹಾಗೂ ಕಲ್ಕತ್ತ ವಿಶ್ವ ವಿದ್ಯಾಲಯಗಳಲ್ಲಿ ಪ್ರವೀಣ ವಿದ್ಯಾರ್ಥಿಯೆನಿಸಿದ್ದರು. ಜೀವನದ ಪ್ರಥಮ ಹಂತದಲ್ಲಿ ವಿಪ್ಲವಿಗಳ ದಳಕ್ಕೂ, ನಂತರ ಕಾಂಗ್ರೆಸ್‌ಗೂ ಸೇರಿದ್ದರು. ೧೯೨೦ರಲ್ಲಿ ನಾಗಪುರದ ಕಾಂಗ್ರೆಸ್ ಅಧಿವೇಶನದಿಂದ ಹಿಂದಿರುಗುವ ಪಥದಲ್ಲಿ ಕಾಶಿಯಲ್ಲಿದ್ದ ಸ್ವಾಮಿ ತುರೀಯಾ ನಂದರ ದರ್ಶನ ಮಾಡಿ ರಾಜಕೀಯವನ್ನು ತ್ಯಜಿಸಿ ಮರುವರ್ಷವೆ ಮಾಯಾವತಿ ಅದ್ವೈತ ಆಶ್ರಮವನ್ನು ಸೇರಿದರು. ಮೊದಲೇ ೧೯೧೬ರಲ್ಲಿ ಅವರು ಶ್ರೀಮಾತೆಯವರಿಂದ ಮಂತ್ರದೀಕ್ಷೆಯನ್ನೂ, ನಂತರ ಸ್ವಾಮಿ ಶಿವಾನಂದರಿಂದ ಬ್ರಹ್ಮಚರ್ಯ ದೀಕ್ಷೆಯನ್ನೂ, ೧೯೨೩ರಲ್ಲಿ ಸ್ವಾಮಿ ಶಾರದಾನಂದರಿಂದ ಸಂನ್ಯಾಸವನ್ನೂ ಪಡೆದರು. ೧೯೩೧ರಲ್ಲಿ ನ್ಯೂಯಾರ್ಕ್‌ಗೆ ಸ್ವಾಮಿ ಬೋಧಾನಂದರ ಸಹಕಾರಿಗಳಾಗಿ ಬಂದಿದ್ದ ಅವರು, ೧೯೩೩ರಲ್ಲಿ ನ್ಯೂಯಾರ್ಕ್ ರಾಮಕೃಷ್ಣ-ವಿವೇಕಾನಂದ ಕೇಂದ್ರವನ್ನು ಪ್ರತಿಷ್ಠಾಪಿಸಿ ತಮ್ಮ ಕೊನೆಯವರೆಗೂ ಅಲ್ಲಿನ ಅಧ್ಯಕ್ಷರಾಗಿದ್ದರು. ೨೧.೦೭.೧೯೭೩ ರಂದು ೭೮ ವರ್ಷ ವಯಸ್ಸಿನಲ್ಲಿ ಅವರು 'ಸಹಸ್ರದ್ವೀಪೋದ್ಯಾನ' (Thousand Island Park) ದಲ್ಲಿ ದೇಹತ್ಯಾಗ ಮಾಡಿದರು.

ಇತಿಹಾಸವು ಎಂದೂ ನೇರವಾಗಿಯೂ ಸಮವಾಗಿಯೂ ಚಲಿಸುವುದಿಲ್ಲ. ಯಾವುದೇ ವ್ಯಕ್ತಿಯ, ಸಂಸ್ಥೆಯ ಅಥವಾ ಜನ ಜಾತಿಯ ಇತಿಹಾಸವು ಉತ್ಥಾನ-ಪತನ, ಉನ್ನತಿ-ಅವನತಿಗಳಿಂದೊಡಗೂಡಿ ಚಲಿಸುವುದು. ರೋಮನ್, ಮೊಗಲ್ ಹಾಗೂ ಬ್ರಿಟಿಷರೇ ಮೊದಲಾದ ಸಾಮ್ರಾಜ್ಯಗಳು ಉನ್ನತಿ ಹೊಂದಿದಂತೆಯೆ ಅವನತಿಯನ್ನು ಹೊಂದಿದುದಕ್ಕೆ ಇತಿಹಾಸವು ಸಾಕ್ಷಿ. ಇದು ವ್ಯಕ್ತಿಗಳ ಮೇಲೆ ನಿರ್ಭರವಾಗಿದೆ - ಕೆಲವರು ಕಟ್ಟುತ್ತಾರೆ, ಮತ್ತೆ ಕೆಲವರು ಕೆಡವುತ್ತಾರೆ. ಈ ನಿರ್ಮಾಣ-ನಾಶಗಳಿಂದಲೇ ವ್ಯಕ್ತಿ, ಸಂಘ ಅಥವ ಜನಜಾತಿಯ ಇತಿಹಾಸವು ನಿರ್ಮಿತವಾಗಿದೆ.

ರಾಮಕೃಷ್ಣ ಸಂಘದ ಇತಿಹಾಸದಲ್ಲಿ ಪ್ರತಿಯೊಬ್ಬ ಸಾಧು-ಬ್ರಹ್ಮಚಾರಿಯೂ ದಧೀಚಿಯಂತೆ ಆತ್ಮಸಮರ್ಪಣೆಯನ್ನು ಮಾಡಿದ್ದನ್ನು ಕಾಣುತ್ತೇವೆ. ಈ ಸಂಘದ ಬೆಳವಣಿಗೆ-ವಿಸ್ತಾರವು ಯಾವುದೇ ಒಬ್ಬ ಸಾಧುವಿನಿಂದ ಸಂಭವಿಸಿಲ್ಲ. ಸಂಘದ ಪ್ರತಿಯೊಬ್ಬ ಸಾಧುವೂ ಸಮಾನ ಜವಾಬ್ದಾರಿಯನ್ನು ಹೊತ್ತಿರುವರೆಂದೂ ಹೇಳಲಾಗುವುದಿಲ್ಲ - ಚಾವಣಿಯ ಮೂಲೆಗಂಬಗಳು ನಡುವಿನ ಕಂಬಗಳಿಗಿಂತ ಹೆಚ್ಚು ಭಾರವನ್ನು ತಡೆಯುವಂತೆ ರಾಮಕೃಷ್ಣರು ಸಂಘದ ಮೂಲೆಗಂಬದಂತಿದ್ದರು. ಸ್ವಾಮಿ ನಿಖಿಲಾನಂದರು ಪಾಶ್ಚಾತ್ಯ ಬುದ್ಧಿಜೀವಿಗಳ ಸಮಾಜದಲ್ಲಿ ಆಳವಾದ ಗುರುತನ್ನು ಬಿಟ್ಟು ಹೋಗಿದ್ದಾರೆ. ವಾಸ್ತವವಾಗಿ ಈ ಸಾಧುಗಳೆಲ್ಲರ ಜೀವನ ಚರಿತ್ರೆಯು ರಾಮಕೃಷ್ಣ ಸಂಘದ ಇತಿಹಾಸವನ್ನು ಪುಷ್ಟೀಕರಿಸುತ್ತದೆ.

ನಾನು ಸ್ವಾಮಿ ನಿಖಿಲಾನಂದರನ್ನು ಮೊದಲ ಬಾರಿ ಕಂಡದ್ದು ಬೇಲೂರು ಮಠದಲ್ಲಿ, ೧೧.೦೩.೧೯೫೯ ರಂದು. ಠಾಕೂರರ ಜನ್ಮ ದಿನವಾಗಿದ್ದ ಅಂದು ಮಠದ ಮೈದಾನದಲ್ಲಿ ಅವರು ಇಂಗ್ಲಿಷಿನಲ್ಲಿ ಭಾಷಣ ನೀಡಿದ್ದರು. ಅದ್ವೈತ ಆಶ್ರಮಕ್ಕೆ ಮರಳಿದಾಗ, ಅವರ ಭಾಷಣದ ಸಾರಾಂಶವನ್ನು ನಾನು ನನ್ನ ಡೈರಿಯಲ್ಲಿ ಬರೆದೆ:

''ಅವತಾರ ಪುರುಷರ ಮನಸ್ಸಿನಲ್ಲಿ ಚಿಂತನೆಗಳು ಮೂಡುತ್ತಿದ್ದಂತೆಯೆ ಅವು ವಾಸ್ತವ ರೂಪವನ್ನು ತಾಳುತ್ತವೆ. ಒಂದು ದಿನ ಠಾಕೂರರು ಮಥುರನ ಜತೆ ಕುದುರೆ ಗಾಡಿಯಲ್ಲಿ ಕಲ್ಕತ್ತಕ್ಕೆ ಹೋಗುತ್ತಿದ್ದರು. ಬಾರಾನಗರವನ್ನು ಸಮೀಪಿಸುತ್ತಿದ್ದಂತೆ ಭಾವಾವಸ್ಥೆಯಲ್ಲಿ ರಾಮಾಯಣದ ಚಿತ್ರವೊಂದು ಠಾಕೂರರ ಮನಸ್ಸಿಗೆ ಬಂತು. ರಾವಣನು ಸೀತೆಯ ಹರಣ ಮಾಡಿ ರಥವನ್ನು ಓಡಿಸುತ್ತಿದ್ದಾಗ ಜಟಾಯು ಅವನನ್ನು ತಡೆಯಲು ಪ್ರಯತ್ನಿಸಿತು. ಅದೇ ಸಮಯ ಇದ್ದಕ್ಕಿದ್ದಂತೆ ಗಾಡಿಯ ಕುದುರೆಯ ಲಗಾಮು ಕಡಿದು ನಿಯಂತ್ರಣ ತಪ್ಪಿತು. ಹೀಗೇಕೆ ಆಯಿತೆಂದು ಮಥುರನು ಯೋಚಿಸಿದನು. ಠಾಕೂರರು ಭಾವಾವಸ್ಥೆಯಿಂದ ಹೊರಬಂದಾಗ ಅವರಿಗಾದ ದರ್ಶನದ ಬಗ್ಗೆ ಕೇಳಿದ ಮಥುರ, 'ತಂದೆ! ಹೀಗಾದರೆ ನಿಮ್ಮೊಂದಿಗೆ ರಸ್ತೆಯಲ್ಲಿ ಚಲಿಸುವುದು ಕಷ್ಟವೆ' ಎಂದು ಉದ್ಗರಿಸಿದನು.''

೧೯೬೩-೬೪ರ ಸ್ವಾಮೀಜಿಯ ಜನ್ಮಶತಾಬ್ದಿ ಉತ್ಸವಕ್ಕೆ ದೇಶ ವಿದೇಶಗಳಿಂದ ಗೌರವಾನ್ವಿತ ವ್ಯಕ್ತಿಗಳು ಬೇಲೂರು ಮಠಕ್ಕೂ ಕಲ್ಕತ್ತಕ್ಕೂ ಬಂದಿದ್ದರು. ಪ್ರಭವಾನಂದಜಿಯವರೊಂದಿಗೆ ಕ್ರಿಸ್ಟೋಫರ್ ಇಷರ್‌ವುಡ್ ಬಂದಿದ್ದರು. ೦೮.೦೧.೧೯೬೪ರಂದು ಬೇಲೂರು ಮಠದಲ್ಲಿ ಸಾಧು-ಸಮ್ಮೇಳನ ನಡೆಯಿತು. ಸ್ವಾಮಿ ಯತೀಶ್ವರಾನಂದಜಿ ಅಧ್ಯಕ್ಷತೆ ವಹಿಸಿದ್ದ ಈ ಕಾರ್ಯಕ್ರಮದಲ್ಲಿ ಸ್ವಾಮಿ ಪ್ರಭವಾನಂದ, ಸ್ವಾಮಿ ನಿಖಿಲಾನಂದ, ಸ್ವಾಮಿ ರಂಗನಾಥಾನಂದ, ಸ್ವಾಮಿ ಸಂಬುದ್ಧಾನಂದ, ಸ್ವಾಮಿ ಪುಣ್ಯಾನಂದ, ಸ್ವಾಮಿ ಹಿರಣ್ಮಯಾನಂದ, ಸ್ವಾಮಿ ಸಿದ್ಧಾತ್ಮಾನಂದ ಹಾಗೂ ಸ್ವಾಮಿ ಲೋಕೇಶ್ವರಾನಂದರು ಭಾಷಣಕಾರರಾಗಿದ್ದರು ಎಂದು ನನ್ನ ದಿನಚರಿಯಲ್ಲಿ ಬರೆದಿರುವೆ.

ನವೀನತೆಯನ್ನು ಆರಾಧಿಸುವ ಸ್ವಭಾವ ನನ್ನದು. ಸದಾ ಠಾಕೂರ್-ಶ್ರೀಮಾತೆ-ಸ್ವಾಮೀಜಿಯವರಿಗೆ ಸಂಬಂಧಿಸಿದ ನೂತನ ಘಟನೆಗಳು, ನೂತನ ಉಪದೇಶಗಳನ್ನು ಕೇಳುವುದು-ಹೇಳುವುದೆಂದರೆ ನನಗೆ ಎಲ್ಲಿಲ್ಲದ ಪ್ರೀತಿ. ನಿಖಿಲಾನಂದಜಿ ಅತ್ಯಂತ ಆತ್ಮೀಯ ವಲಯದವರೊಂದಿಗೆ ಬೆರೆಯುತ್ತಿದ್ದರು. ಶ್ರೀಮಾತೆಯವರ ಕೃಪಾಪಾತ್ರರಾಗಿದ್ದ ಅವರು ಠಾಕೂರರ ಶಿಷ್ಯಂದಿರಿಗೆ ಬಹಳ ಪ್ರಿಯರಾಗಿದ್ದರು. ಅವರೊಮ್ಮೆ ಹಡಗಿನಲ್ಲಿ ಉತ್ತರ ಧ್ರುವದ ಆರ್ಕ್‌ಟಿಕ್ ಪ್ರದೇಶಗಳಿಗೆ ಯಾತ್ರೆ ಮಾಡುತ್ತಿದ್ದಾಗ ಹಡಗಿನ ಕ್ಯಾಬಿನ್‌ನಲ್ಲಿ ಅವರ ಹೆಸರನ್ನು ಗಮನಿಸಿದ ಸಹಯಾತ್ರಿಯೊಬ್ಬರು ಅವರನ್ನು ಕೇಳಿದರು, ''ನೀವು ಸ್ವಾಮಿ ವಿವೇಕಾನಂದರ ಹೆಸರನ್ನು ಕೇಳಿರುವಿರೆ?'' ಆಶ್ಚರ್ಯಚಕಿತರಾಗಿ ಮಹಾರಾಜರು ಉತ್ತರಿಸಿದರು, ''ನಾನು ಅವರ ಮಹಾಸಂಘಕ್ಕೆ ಸೇರಿದ ಸಂನ್ಯಾಸಿ.'' ಸಜ್ಜನರು, ತಾವು ೧೮೯೩ರಲ್ಲಿ ನಡೆದ ಶಿಕಾಗೊ ಧರ್ಮಸಮ್ಮೇಳನದಲ್ಲಿ ಉಪಸ್ಥಿತರಿದ್ದರೆಂದೂ, ಸ್ವಾಮೀಜಿಯವರ ಮಾತುಗಳಿಂದ ಬಹಳ ಪ್ರಭಾವಿತರಾಗಿದ್ದು ತಮ್ಮ ಧರ್ಮದಲ್ಲಿ ಕಳೆದುಹೋಗಿದ್ದ ತಮ್ಮ ವಿಶ್ವಾಸ ಮರುಕಳಿಸಿತೆಂಬುದಾಗಿಯೂ ಹೇಳಿದರು. ''ವಿವೇಕಾನಂದರು ಕೇವಲ ಹಿಂದೂಧರ್ಮದ ಪ್ರತಿನಿಧಿ ಮಾತ್ರ ಆಗಿರಲಿಲ್ಲ, ಅವರು ಎಲ್ಲ ಧರ್ಮಗಳ ನಿಜವಾದ ಪ್ರತಿನಿಧಿಯಾಗಿದ್ದರು'' ಎಂದ ಅವರು, ಇನ್ನೂ ಅನೇಕ ಘಟನೆಗಳನ್ನು ಹೇಳಿದ್ದರು.

ಸ್ವಾಮೀಜಿಯವರಿಗೆ ಸಂಬಂಧಿಸಿದ ಈ ಸಮಾರಂಭದಲ್ಲಿ ನಿಖಿಲಾನಂದಜಿಯವರೊಡನೆ ಮಿ.ಬೆಸ್ಟರ್ ಕಾರ್ಲ್‌ಸನ್ (ಕ್ಸೆರಾಕ್ಸ್ ಯಂತ್ರವನ್ನು ಕಂಡುಹಿಡಿದವನು) ಮ್ಯಾನ್ಸ್‌ಫೀಲ್ಡಿನ ಕೌಂಟೆಸ್ ಕೊಲೆರೆಡೊ ಹಾಗೂ ಮಿಸ್ ರೂದ್ ಪೀಟರ್ ಇದ್ದರು. ಶತಾಬ್ದಿ ಸಮಾರಂಭವು ಕಲ್ಕತ್ತದ ಪಾರ್ಕ್ ಸರ್ಕಸ್ ಮೈದಾನದಲ್ಲಿ ನಡೆದಿತ್ತು. ನಾನಾಗ ಅದ್ವೈತ ಆಶ್ರಮದ ಬ್ರಹ್ಮಚಾರಿಯಾಗಿದ್ದೆ. ಒಂದು ಸಂಜೆ ಮಹಾರಾಜರು ತಮ್ಮ ಸಂಗಡಿಗರೊಂದಿಗೆ ಅದ್ವೈತ ಆಶ್ರಮಕ್ಕೆ ಬಂದಾಗ ನಾನು ಚಹಾ ಹಾಗೂ ತಿಂಡಿಗಳನ್ನು ಅವರಿಗೆ ನೀಡಿ ಸೇವೆ ಮಾಡಿದ್ದೆ. ನಾನು ಅವರನ್ನು, ''ಮಹಾರಾಜ್, ನೀವು ಸ್ವಾಮೀಜಿಯವರ ಜೀವನಚರಿತ್ರೆಯಲ್ಲಿ, ಪ್ರೊ. ರೈಟ್ ಅವರು ಸ್ವಾಮೀಜಿಯವರೊಂದಿಗೆ ಸಹಸ್ರ ದ್ವೀಪೋದ್ಯಾನದಲ್ಲಿದ್ದರು ಎಂದು ಬರೆದಿದ್ದೀರಿ. ನನಗೆ ತೋರುವಂತೆ ಅವರು ಡಾ.ರೈಟ್, ಪ್ರೊ.ರೈಟ್‌ಅಲ್ಲ,'' ಎಂದಾಗ, ಅವರು ತಕ್ಷಣವೆ ಈ ವಿಷಯವನ್ನು ತಿದ್ದಿಕೊಳ್ಳಬೇಕೆಂದು ಕೌಂಟೆಸ್‌ಗೆ ಹೇಳಿದರು.

ವಿವೇಕಾನಂದರ ಜನ್ಮಶತಾಬ್ದಿ ಸಮಾರಂಭದ ಸಮಯ ಕಲ್ಕತ್ತ ವಿಶ್ವವಿದ್ಯಾಲಯದಲ್ಲಿ ವಿಶೇಷ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ವಿಶ್ವವಿದ್ಯಾಲಯದ ಉಪ ಪ್ರಾಂಶುಪಾಲರು ಸ್ವಾಮಿ ನಿಖಿಲಾನಂದರಿಗೆ ವಿಶೇಷ ಸ್ವಾಗತ ನೀಡಿದರು. ಮಹಾರಾಜರು ಹಾಗೂ ರಂಗನಾಥಾನಂದಜಿ ಭಾಷಣ ನೀಡಿದರು. ಈ ಭಾಷಣವನ್ನು ಕೇಳಲು, ಕಿಕ್ಕಿರಿದ ಸಭಾಂಗಣದಲ್ಲಿ ನಾನು ಉಪಸ್ಥಿತನಿದ್ದೆ.

ಯೂರೋಪಿಗೆ ಬಂದು ಜನರನ್ನು ಭ್ರಮೆಗೊಳಿಸುವ ಅನೇಕ ಭಾರತೀಯ ಯೋಗಿಗಳಂತೆಯೆ ಸ್ವಾಮಿ ನಿಖಿಲಾನಂದರೂ ಒಬ್ಬರು ಎಂಬುದು ಅವರೊಂದಿಗಿದ್ದ ಡ್ಯೂಕ್‌ರ ಅಭಿಪ್ರಾಯ. ನಂತರ ಅವರು ಸ್ವಾಮೀಜಿಯವರ ವ್ಯಕ್ತಿತ್ವ ಹಾಗೂ ಮಾತುಗಳಿಗೆ ಮುಗ್ಧರಾಗಿ ಕೆಲವು ವಾರ ನಿಯಮಿತವಾಗಿ ಅವರ ಸತ್ಸಂಗವನ್ನು ಪಡೆದರು. ಭಾರತಕ್ಕೆ ಹಿಂದಿರುಗುವ ಮುನ್ನ ಸ್ವಾಮೀಜಿಯವರು ಡ್ಯೂಕ್-ರಿಗೆ ತಮ್ಮ ಶಿಷ್ಯರಾಗಿ ಸಂಸಾರವನ್ನು ತ್ಯಜಿಸಿ ಭಾರತಕ್ಕೆ ಬರಲು ತಯಾರಿರುವರೇ ಎಂದು ಕೇಳಿದರು. ಅದರಿಂದ ತಾವು ಪಡೆಯುವ ಲಾಭವಾದರೂ ಏನು ಎಂದು ಡ್ಯೂಕ್ ಪ್ರಶ್ನಿಸಿದಾಗ ಸ್ವಾಮೀಜಿ ಉತ್ತರಿಸಿದರು, ''ನಾನು ನಿಮಗೆ ಮೃತ್ಯುವನ್ನು ಪ್ರೀತಿಸುವುದು ಹೇಗೆಂದು ಕಲಿಸುತ್ತೇನೆ.'' ಸ್ವಾಮೀಜಿ ತಮ್ಮೊಂದಿಗೆ ಹಾಸ್ಯದಲ್ಲಿ ತೊಡಗಿರುವರೆಂದು ಭಾವಿಸಿದ ಅವರು ಪುನಃ ಕೇಳಿದರು, ''ಮೃತ್ಯುವನ್ನು ಪ್ರೀತಿಸಿದರೆ ಏನು ಲಾಭ? ಯೌವನ, ಆರೋಗ್ಯ ಹಾಗೂ ಧನ – ಇವೆಲ್ಲಾ ಇರುವ ನಾನು ಜೀವನವನ್ನು ಆನಂದದಿಂದ ಕಳೆಯಬೇಕೆಂದಿರುವೆ.'' ಸ್ವಾಮೀಜಿ ಗಂಭೀರರಾಗಿ

ಹೇಳಿದರು, ''ಮೃತ್ಯು ಬಂದಾಗ ಆನಂದದಿಂದ ಅವನ್ನು ಸ್ವೀಕರಿಸ ಲಾಗುವಂತಹ ಉಚ್ಚಸ್ತರಕ್ಕೆ ನಿಮ್ಮ ಮನಸ್ಸನ್ನು ಕೊಂಡೊಯ್ಯುವೆ.''

ನಂತರದ ೩೦ ವರ್ಷ ಡ್ಯೂಕ್ ಸ್ವಾಮೀಜಿಯವರನ್ನು ಮರೆತಿದ್ದರು. ನಂತರ ಅವರು ತಮ್ಮ ಜೀವನದಲ್ಲಿ ನಾನಾ ಕಷ್ಟಗಳನ್ನು ಎದುರಿಸಬೇಕಾಯಿತು. ಸ್ವಾಮೀಜಿಯವರ ಪೂರ್ವ ಸ್ಮೃತಿಯು ಮರುಕಳಿಸಿತು. ಅವರಿಗಾಗಿ ಅವರು ಪ್ಯಾರಿಸ್, ಲಂಡನ್, ನ್ಯೂಯಾರ್ಕ್‌ಗಳಲ್ಲಿ ವ್ಯರ್ಥವಾಗಿ ಹುಡುಕಾಡಿದರು. ೧೯೩೪ರಲ್ಲಿ ಪ್ಯಾರಿಸ್‌ಗೆ ಹೋಗುವ ಜಹಜಿನಲ್ಲಿ ನಿಖಿಲಾನಂದರ ಹೆಸರನ್ನು ಕಂಡು ಸ್ವಾಮೀಜಿಯವರ ಬಗ್ಗೆ ತಿಳಿದುಕೊಂಡರು. ಡ್ಯೂಕ್ ಯುರೋಪ್ ಹಾಗೂ ಅಮೆರಿಕದಲ್ಲಿ ಬಹಳ ಸುತ್ತಾಡಿದರು. ಯೂರೋಪಿನ ಅನೇಕ ಭಾಷೆಗಳಲ್ಲಿ ಅವರು ಮಾತನಾಡಬಲ್ಲವರಾಗಿದ್ದು, ಇಂಗ್ಲಿಷ್ ಭಾಷೆಯಲ್ಲಿ ಪರಿಣತಿಯನ್ನು ಹೊಂದಿದ್ದರು. ಇತಿಹಾಸ, ಧರ್ಮ, ದರ್ಶನಶಾಸ್ತ್ರ, ರಾಜನೀತಿ ಮುಂತಾದ ವಿಷಯಗಳ ಅನುರಾಗಿಗಳಾಗಿದ್ದರು. ೩೦ ಮೇ ೧೯೫೨ರಲ್ಲಿ ೭೬ರ ಹರೆಯದ ಸ್ವಾಮೀಜಿಯವರ ಈ ಪ್ರೀತಿಯ ಭಕ್ತರು ತಮ್ಮ ದೇಹವನ್ನು ತ್ಯಜಿಸಿದರು.

ಸ್ವಾಮಿ ನಿಖಿಲಾನಂದರು ದೇಶವಿದೇಶಗಳ ಪ್ರಖ್ಯಾತ ವ್ಯಕ್ತಿಗಳ ಸಂಪರ್ಕಕ್ಕೆ ಬಂದಿದ್ದರು. ತಮ್ಮ ಭಾಷಣಗಳಲ್ಲಿ ಅವರು ಈ ವ್ಯಕ್ತಿಗಳ ನೆನಪುಗಳನ್ನು ಉಲ್ಲೇಖಿಸುತ್ತಿದ್ದರು. ೧೯೬೭ರ ಏಪ್ರಿಲ್ ೮ರಂದು 'ಮೌನದ ಚಿಕಿತ್ಸಕ ಹಾಗೂ ಕ್ರಿಯಾತ್ಮಕ ಶಕ್ತಿ' ಎಂಬ ಭಾಷಣದಲ್ಲಿ ಅವರು ಗಾಂಧೀಜಿಯವರನ್ನು ಸ್ಮರಿಸುತ್ತ ಹೇಳುತ್ತಾರೆ, ''ಮಹಾತ್ಮ ಗಾಂಧೀಜಿ ಒಮ್ಮೊಮ್ಮೆ ಮುಷ್ಕರವನ್ನು ಹೂಡಿ ಮೌನವ್ರತವನ್ನಾಚರಿಸುತ್ತಿದ್ದರು. ೧೦, ೧೫, ೨೧ ದಿನಗಳ ವ್ರತವನ್ನವಲಂಬಿಸಿ ಏಕಾಕಿಯಾಗಿರುತ್ತಿದ್ದರು. ಒಮ್ಮೆ ಅವರು ೨೧ ದಿನಗಳ ವ್ರತವನ್ನವಲಂಬಿಸಿದಾಗ ಅವರ ಶರೀರ ಅತ್ಯಂತ ದುರ್ಬಲಗೊಂಡಿತ್ತು. ಆಗ ಅವರು ಯಾರನ್ನೂ ಭೇಟಿಯಾಗಲು ಬಿಡುತ್ತಿರಲಿಲ್ಲ.

''ಏನೇ ಆಗಲಿ, ಗಾಂಧೀಜಿಯವರ ಪತ್ನಿ ಹಾಗೂ ಪುತ್ರ ಅವರನ್ನು ಭೇಟಿಯಾಗಲು ನನಗೆ ಅನುಮತಿಯನ್ನು ನೀಡಿದರು. ನಾನು ಹೋದಾಗ ಅವರು ಹಾಸಿಗೆಯಲ್ಲಿ ಅರ್ಧ ಮಲಗಿದ್ದರು. ನಾನೆಂದೆ, 'ನಿಮಗೆ ಶ್ರದ್ಧೆಯನ್ನು ಸೂಚಿಸಲು ಬಂದಿರುವೆ. ಅರ್ಧ ನಿಮಿಷಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ.' ಅವರು ನಾನು ಕುಳಿತುಕೊಳ್ಳುವಂತೆ ಸನ್ನೆ ಮಾಡಿದರು.

''ಬಳಿಕ ನಾನಾ ವಿಷಯಗಳ ಬಗ್ಗೆ ಅವರು ನನ್ನನ್ನು ಪ್ರಶ್ನಿಸಿದರು. ನಾನೆಂದೆ, 'ಮಹಾತ್ಮಾಜೀ, ನಿಮ್ಮ ಶರೀರ ನಿಮಗೆ ಮಾತ್ರ ಸೇರಿಲ್ಲ. ನಿಮ್ಮ ದೇಹವು ಇಡೀ ದೇಶಕ್ಕೆ ಸೇರಿದ ಸಂಪತ್ತು. ಈ ದೀರ್ಘಧರಣಿಯು ನಿಮ್ಮ ಶರೀರವನ್ನು ಅಪಾಯಕರ ಸ್ಥಿತಿಗೆ ಕೊಂಡೊಯ್ಯುತ್ತಿದೆ.' ನನ್ನತ್ತ ದೃಷ್ಟಿಸುತ್ತ ಅವರು ಸ್ಪಷ್ಟವಾಗಿ ಹೇಳಿದರು, 'ನಾನು ವಿಭ್ರಾಂತನಾಗಿ, ಯಾವುದೇ ಸಮಸ್ಯೆಯ ಪರಿಹಾರ ನನಗೆ ದೊರಕದಿದ್ದಾಗ, ಧರಣಿ ಮತ್ತು ಮೌನವ್ರತವನ್ನಾಚರಿಸುತ್ತೇನೆ. ಆಗ ನೀರವ ಪ್ರಾರ್ಥನೆಯ ಅಂತರಾಳದಲ್ಲಿ ಸಮಸ್ಯೆಯ ಪರಿಹಾರವು ಕಂಡುಬರುತ್ತದೆ.' ''

೧೯೬೭ರಲ್ಲಿ ಸಹಸ್ರದ್ವೀಪೋದ್ಯಾನದಲ್ಲಿ ನಡೆದ 'ಕೇನೋಪನಿಷತ್' ತರಗತಿಯಲ್ಲಿ ಸ್ವಾಮಿ ನಿಖಿಲಾನಂದರು ಹೇಳಿದರು : ''ಭಾರತ ಸ್ವಾತಂತ್ರ್ಯವಾದ ಬಳಿಕ ಡಾ. ಸರ್ವೆಪಲ್ಲಿ ರಾಧಾಕೃಷ್ಣನ್ ರಷ್ಯದ ಪ್ರಥಮ ರಾಯಭಾರಿಯಾದರು. ಅವರು ಸ್ವತಃ ನನಗೆ ಹೀಗೆ ಹೇಳಿದ್ದರು 'ನಾನೊಂದು ದಿನ ರಷ್ಯದ ಪ್ರೆಸಿಡೆಂಟರಾದ ಸ್ಟಾಲಿನ್‌ಗೆ ಹೇಳಿದೆ, ''ಧರ್ಮದಲ್ಲಿ ನಿಮಗೇಕೆ ವಿಶ್ವಾಸವಿಲ್ಲ? ನೀವು ಚರ್ಚನ್ನೂ ಸ್ವೀಕರಿಸುವುದಿಲ್ಲ.'' ಸ್ಟಾಲಿನ್ ಉತ್ತರಿಸಿದರು, ''ನನಗೆ ಸೇಂಟ್ ಪಾಲ್-ಅವರು ಸಿಕ್ಕಿದರೆ, ನಾಳೆಯೆ ಚರ್ಚ್‌ಗೆ ಹೋಗುವೆ.'' ಎಂದು'. ಧರ್ಮದ ಸೋಗನ್ನು ಅವರು ಇಷ್ಟಪಡುತ್ತಿರಲಿಲ್ಲ.''

೧೯೭೭ರ ಮೇ ೩೧ರಂದು ಬಾಂಬೆಯ ಗೇಟ್ ವೇ ಆಫ್ ಇಂಡಿಯಾದಲ್ಲಿ ಸ್ವಾಮಿ ವಿವೇಕಾನಂದರ ಭವ್ಯ ಮೂರ್ತಿಯನ್ನು ಉದ್ಘಾಟಿಸಲಾಯಿತು. ಅನೇಕ ಸಾಧುಗಳು ಸೇರಿದ್ದರು. ೧ನೆಯ ಜೂನ್ ೧೯೭೦ರಂದು ನಾನು ಹಾಲಿವುಡ್ ಕೇಂದ್ರಕ್ಕೆ ನಿಯುಕ್ತಿ ಹೊಂದಿ ಅಲ್ಲಿಗೆ ಯಾತ್ರೆ ಮಾಡಿದಾಗ ಪ್ಯಾರಿಸ್ ಹಾಗೂ ಲಂಡನ್ ಮಾರ್ಗದಲ್ಲಿ ನ್ಯೂಯಾರ್ಕ ತಲುಪಿದೆ. ಜೂನ್ ೧೧ರಂದು ಸ್ವಾಮಿ ನಿಖಿಲಾನಂದರ ಆಮಂತ್ರಣವನ್ನು ಸ್ವೀಕರಿಸಿ ಮಧ್ಯಾಹ್ನ ಭೋಜನಕ್ಕೆ ಅಲ್ಲಿನ ರಾಮಕೃಷ್ಣ-ವಿವೇಕಾನಂದ ಸೆಂಟರಿಗೆ ಹೋದೆ. ಮಹಾರಾಜರೊಂದಿಗೆ ನಾನಾಗ ಸುಮಾರು ಒಂದು ಗಂಟೆ ಕಾಲ ಮಾತನಾಡಿದ್ದೆ. ''ಮಹಾರಾಜ್, ರಾಮಕೃಷ್ಣ ಸಂಘಕ್ಕೆ ನೀವು ಅಪಾರ ಕೊಡುಗೆಯನ್ನು ನೀಡಿರುವಿರಿ; ನೀವು ಬಹು ಅಮೂಲ್ಯ ಕಾರ್ಯಗಳನ್ನು ಮಾಡಿರುವಿರಿ. ಮಠದ ಸಾಧುಗಳೆಲ್ಲ ನಿಮ್ಮ ಬಗ್ಗೆ ಹೆಮ್ಮೆಯಿಂದ ಮಾತನಾಡುತ್ತಾರೆ. ಅದಲ್ಲದೆ 'Gospel of Sri Ramakrishna'' ವನ್ನು ಬಂಗಾಳಿಯಿಂದ ಇಂಗ್ಲಿಷಿಗೆ ಅನುವಾದಿಸಿರುವುದು ಅತ್ಯಂತ ಕಠಿಣ ಕಾರ್ಯ,'' ಎಂದಾಗ ಮಹಾರಾಜರ ಕಣ್ಣುಗಳು ತುಂಬಿ ಬಂದವು. ಅವರೆಂದರು, ''Gospelನ ಅನುವಾದವು ಠಾಕೂರರ ಕೃಪೆಯಿಂದ ಮಾಡಲಾಯಿತು. ಅವರೇ ನನ್ನಿಂದ ಮಾಡಿಸಿದರು.'' ಬಳಿಕ ಅವರ ಮತ್ತೊಂದು ಆಸೆಯನ್ನು ನನ್ನೆದುರು ವ್ಯಕ್ತಪಡಿಸಿದರು: ''ನೋಡು, ನನಗೆ ಇನ್ನೊಂದು ಆಸೆಯಿದೆ. ಬೇಲೂರು ಮಠದ ಠಾಕೂರರ ಮಂದಿರದೆದುರು ಧೂಳಿನಲ್ಲಿ ಹೊರಳುತ್ತ ಪ್ರಣಾಮ ಮಾಡಬೇಕೆಂದು. ಈ ಆಸೆ ಬಹುಶಃ ಪೂರ್ಣವಾಗದು. ಕಾರಣ, ನಾನೀಗ ಮುದುಕನಾಗಿ ಬಿಟ್ಟಿದ್ದೇನೆ. ಅದಲ್ಲದೆ, ಡೊರೋಥಿ (Dorothy - ಅವರ ಸೆಕ್ರೆಟರಿ) ಹಾಗೂ ಇತರರು ನನ್ನನ್ನು ಅಲ್ಲಿಗೆ ಹೋಗಲು ಬಿಡುವುದಿಲ್ಲ.''

*(ಮುಂದಿನ ಸಂಚಿಕೆಗೆ)*